ಅಧ್ಯಕ್ಷರು:- ಪೆರಿಗೆ ಆಸ್ಪತ್ರೆಗಳನ್ನು ಎಲ್ಲಾ ಮುಚ್ಚುಬಿಟ್ಟರೆ ಜನಸಂಖ್ಯೆ ನಿಯಂತ್ರಣ ತಾನೇ ತಾನಾಗಿ ಹೋಗುತ್ತದೆ ಅಲ್ಲವೇ?

ಮೂಡಿಗೆರೆ ತಾಲ್ಲೂಕಿನ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ನಿಯೋಜಿಸದೆ ಇರುವುದು

86 (396) ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೂಡಿಗೆರೆ ತಾಲ್ಲೂಕಿನ ಜಾವಳಿ ಕುಂದೂರು, ಗುತ್ತಿ ಬಿ. ಹೊಸಹಳ್ಳಿ ನಂದಿಪುರ, ಈ ಸ್ಥಳಗಳಲ್ಲಿ ಒಂದು ವರ್ಷದಿಂದ ವೈದ್ಯರುಗಳಿಲ್ಲದೆ, ಅಲ್ಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಈ ಸ್ಥಳಗಳಿಗೆ ನಿಯೋಜಿಸಿರುವ ವೈದ್ಯರುಗಳು ಕರ್ತವ್ಯ ಮೇಲೆ ಹಾಜರಾಗದಿರಲು ಕಾರಣವೇನು?

ಈ) ಹಾಗಿದ್ದಲ್ಲಿ ಇವರುಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಹೌದು.

ಆ) ಜುಲೈ 1991ರ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯರುಗಳನ್ನು ಈ ಸ್ಥಳಗಳಿಗೆ ನೇಮಕಾತಿ ಮಾಡಲಾಗಿತ್ತು.

ಇ) ಹಾಜರಾಗದಿರುವ ಕಾರಣ ತಿಳಿದಿರುವುದಿಲ್ಲ.

ಈ) ನಿಗದಿತ ಸೇರುವ ಕಾಲ ಅಥವಾ ವಿಸ್ತರಿತ ಸೇರುವ ಕಾಲದೊಳಗಾಗಿ ಕರ್ತವ್ಯಕ್ಕೆ ಹಾಜರಾಗಲು ತಪ್ಪಿದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ನಿಯಮ 18 (3) ರ ಪ್ರಕಾರ, ನೇಮಕಾತಿಗೊಂಡ ಹುದ್ದೆಯ ಮೇಲಿನ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ ಅವರ ನೇಮಕಾತಿ ರದ್ದಾಗುತ್ತದೆ.

ಮೂಡಿಗೆರೆ ಕ್ಷೇತ್ರದಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ

100 (330) ಶ್ರೀ ಸೋಮಪ್ಪ ಸುವರ್ಣ (ಮುಲ್ಕಿ-ಮೂಡಬಿದ್ರೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೂಡಬಿದರೆ ಕ್ಷೇತ್ರವಲ್ಲಿರುವ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯರ ಕೊರತೆ ಇದೆ ಹಾಗೂ ಅವು ಯಾವುವು ?

ಆ) ವೈದ್ಯರ ಕೊರತೆಯಿಂದ ಬಡಜನರಿಗೆ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ) ಇಲ್ಲಿಗೆ ಬೇಕಾದ ವೈದ್ಯ ನೇಮಕದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಈ) ಅಲ್ಲಿಗೆ ವೈದ್ಯರ ನೇಮಕವನ್ನು ಯಾವಾಗ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಎರಡು ವೈದ್ಯರ ಕೊರತೆ ಇದೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಮುಲ್ಕಿ ಮತ್ತೊಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಕಲ್ಲಮಂಡಕೂರಿ.

ಆ) ಪ್ರಾಥಮಿಕ ಆರೋಗ್ಯ ಕೇಂದ್ರ, ಮುಲ್ಕಿಗೆ ಮೂರು ವೈದ್ಯರುಗಳ ಹುದ್ದೆ ಮಂಜೂರಾಗಿದ್ದು ಇಬ್ಬರು ವೈದ್ಯರುಗಳು ಕೆಲಸ ನಿರ್ವಹಿಸುತ್ತಿರುವುದು, ಆದರಿಂದ ಹೆಚ್ಚಿನ ತೊಂದರೆಯಾಗುತ್ತಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ, ಕಲ್ಲಮಂಡಕೂರಿಗೆ ಸಮೀಪದ ಕೇಂದ್ರದ ವೈದ್ಯರನ್ನು ವಾರಕ್ಕೆ ಒಂದು ಅಥವಾ ಎರಡು ಬಾರಿ ಸಂದರ್ಶಿಸಿ ವೈದ್ಯಕೀಯ ಸೌಲಭ್ಯವನ್ನು ಸಾರ್ವಜನಿಕರಿಗೆ ಕೊಡುವ ಏರ್ಪಾಡು ಮಾಡಿ ನ್ನೋಡಿಕೊಳ್ಳಲಾಗುತ್ತಿದೆ.

ಇ) ಸೇವೆಯಲ್ಲಿದ್ದು (ಇನ್‌ಸರ್‌ವೀಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ಹೋಗಿ ಹಿಂದಿರುಗುವ ವೈದ್ಯರನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಸದ್ಯದಲ್ಲಿಯೇ ಮಾಡಲಾಗುವುದು.

ಅಧ್ಯಕ್ಷರು:- ವೈದ್ಯರುಗಳ ಕೊರತೆಗೆ ಸಂಬಂಧಪಟ್ಟಂತೆ ಶ್ರೀಮತಿ ಮೋಟಮ್ಮನವರ ಪ್ರಶ್ನೆಯ ಜೊತೆಗೆ ಮಾನ್ಯ ಸದಸ್ಯರಾ ಸೋಮಪ್ಪ ಸುವರ್ಣರವರೂ ಕೂಡ ತಮ್ಮ ಪ್ರಶ್ನೆಯನ್ನು ಕೇಳಬಹುದು. ಎರಡೂ ಪ್ರಶ್ನೆಗಳೂ ಒಂದೇ ವಿಷಯಕ್ಕೆ ಸಂಬಂಧಪಟ್ಟಿವೆ.

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀಮತಿ ಮೋಟಮ್ಮನವರ ಪರವಾಗಿ):- ಸ್ವಾಮಿ, ಕಳೆದ ಒಂದು ವರ್ಷದಿಂದ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿದ್ದೀರಿ. ಇದು ಆ ಜನರ ಸಾವು ಬದುಕಿನ ಪ್ರಶ್ನೆ. ಒಂದು ವರ್ಷದಿಂದ ಅಲ್ಲಿಗೆ ವೈದ್ಯರನ್ನು ಕೊಟ್ಟಿಲ್ಲ ಎಂದರೆ ಇದು ಬಹಳ ಶೋಚನೀಯವಾದುದು. ಯಾವಾಗ ಅಲ್ಲಿಗೆ ವೈದ್ಯರನ್ನು ಕೊಡುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿಲ್ಲ. ಬಂದಿದೆ ಎಂತಲೇ ಹೇಳಿದ್ದೇವೆ. ಕರ್ನಾಟಕ ಲೋಕಸೇವಾ ಆಯೋಗದವರಿಂದ ಆಯ್ಕೆಯಾದಂಥ ವೈದ್ಯರನ್ನು ಅಲ್ಲಿಗೆ ನಾವು ಪೋಸ್ಟ್ ಮಾಡಿದ್ದೆವು. ಆದರೆ ಆದರಲ್ಲಿ ಪೋಸ್ಟ್ ಗ್ರಾಜುಯೇಷನ್ ಕೋರ್ಸಿಗೆ ಹೋಗುತ್ತಿದ್ದೇವೆಂದು ಕೋರ್ಟಿಗೆ ಹೋಗಿ ಸ್ಟೇಯನ್ನು ಸುಮಾರು 30-40 ಜನ ತಂದಿದ್ದಾರೆ. ಇನ್ನು ಸುಮಾರು 100-110 ಜನರು ಕೆಲಸಕ್ಕೇ ಹಾಜರಾಗಲಿಲ್ಲ. ನೇಮಕಾತಿಯ ಕಾಯ್ದೆ ಪ್ರಕಾರ ಅವರ ನೇಮಕಾತಿ ರದ್ದಾಗಿದೆ. ಈಗ ಹೊಸದಾಗಿ ಆಯ್ಕೆ ಮಾಡುವುದಕ್ಕೆ ತೀವ್ರವಾದ ಕ್ರಮ ತೆಗೆದುಕೊಂಡಿದ್ದೇವೆ.

ಇನ್ನೊಂದು ವಿಚಾರ ಹೇಳುವುದಾದರೆ, ಒರಿಸ್ಸಾ ಸರ್ಕಾರದಲ್ಲಿರತಕ್ಕ ವ್ಯವಸ್ಥೆಯನ್ನು ನಾವೂ ಕೂಡ ಅನುಸರಿಸುತ್ತಿದ್ದೇವೆ. ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಆಯಾಯ ಜಿಲ್ಲೆಗಳಲ್ಲಿ ಇರತಕ್ಕ ವೈದ್ಯರು ಯಾರ್ಯಾರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳುತ್ತಾರೆ ಅವರನ್ನೇ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು ನಂತರ ಅದನ್ನು ಕೆ.ಪಿ.ಎಸ್.ಸಿ. ಗೆ ಕೊಡಬೇಕೆಂದು ಮಾಡಿದ್ದೇವೆ. ಇದು ಬಹಳ ಜರೂರಾಗಿ ಆಗಬೇಕೆಂದು ಸರ್ಕಾರದ ಅಭಿಲಾಷೆ ಇದೆ. ಈ ಹಿನ್ನಲೆಯಲ್ಲಿ ಆದಷ್ಟು ಬೇಗ ವೈದ್ಯರನ್ನು ಪೋಸ್ಟ್ ಮಾಡತಕ್ಕ ಕೆಲಸವನ್ನು ಮಾಡುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ:- ಗ್ರಾಮಾಂತರ ಪ್ರದೇಶಕ್ಕೆ ಹೋಗತಕ್ಕ ಅಭ್ಯರ್ಥಿಗಳು ಆಯ್ಕೆಯಾಗುತ್ತಿಲ್ಲ ಆದುದರಿಂದ ನೀವು ಆಯ್ಕೆಯಾದಂಥ ಅಭ್ಯರ್ಥಿಗಳಿಗೆ ಕೊನೆಯ ಗಡುವನ್ನು ಎಲ್ಲಿಯವರೆಗೆ ಕೊಟ್ಟಿದ್ದೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಗಡುವನ್ನು ಕೊಟ್ಟಿದ್ದೂ ಆಯಿತು, ಈಗ ಅವರನ್ನು ತೆಗೆದದ್ದೂ ಆಯಿತು. ಅವರ ನೇಮಕಾತಿ ರದ್ದಾಗಿದೆ. ಈಗ ಖಾಲಿ ಹುದ್ದೆಗಳಿವೆ ಎಂದು ಕರ್ನಾಟಕ ಲೋಕಸೇವಾ ಆಯೋಗಕ್ಕೆ ನಾವು ಬರೆಯುತ್ತಿದ್ದೇವೆ. ಈ ಮಧ್ಯೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ಕೂಡ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೆ, ಮೂಡಬಿದ್ರೆ ಆಸ್ಪತ್ರೆಯಲ್ಲಿ ಮಹಿಳಾ ವಿಭಾಗದಲ್ಲಿ 10 ಹಾಸಿಗೆಗಳಿದ್ದು ಕಳೆದ 2 ವರ್ಷದಿಂದ ಅಲ್ಲಿ ಮಹಿಳಾ ವೈದ್ಯರ ನೇಮಕಾತಿ ಆಗಬೇಕೆಂದು ನಾವು ಪ್ರಯತ್ನವನ್ನು ಸತತವಾಗಿ ಮಾಡಿದೆವು. ಇತ್ತೀಚೆಗೆ ಒಬ್ಬರ ನೇಮಕಾತಿ ಅಲ್ಲಿಗೆ ಆಯಿತು. ಅವರನ್ನು ಪಿ.ಜಿ.ಕೋರ್ಸಿಗೆ ತಾವು ಕಳುಹಿಸಿದಿರಿ. ಕಳೆದ 2 ವರ್ಷದಿಂದ 10 ಹಾಸಿಗೆಗಳಿರುವ ಆಸ್ಪತ್ರೆಯನ್ನು ತಾವು ತೆರೆಯಲಿಲ್ಲ. ಆದು ಇವತ್ತು ಉಪಯೋಗವಾಗುತ್ತಿಲ್ಲ. ಆದುದರಿಂದ ದಯವಿಟ್ಟು ಅಲ್ಲಿಗೆ ಯಾರನ್ನಾದರೂ ಆದಷ್ಟು ಬೇಗ ಪೋಸ್ಟ್ ಮಾಡಿದರೆ

ಒಳ್ಳೆಯದು. ಹಳ್ಳಿ ವಲಯದ ಉತ್ತಮ ಆಸ್ಪತ್ರೆ, ಮಹಿಳೆಯರ ಶುಶ್ರೂಷೆಗೋಸ್ಕರವೇ, ಊರಿನವರೇ ಕಟ್ಟಿಸಿ ಕೊಟ್ಟಂಥ ಕಟ್ಟಡದ ಉಪಯೋಗಕ್ಕೆ ಬರುತ್ತಿದೆ, ಜನರಿಗೆ ಉಪಯೋಗವಾಗುತ್ತದೆ. ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜೆ. ಪುಟ್ಟಸ್ವಾಮಿಗೌಡ:- ತಾವು ಹೇಳಿದಂಥ ಸಮಸ್ಯೆಗೆ ಹೇಳುವುದಾರೆ, ನಾವು ಒಬ್ಬ ಮಹಿಳಾ ವೈದ್ಯರನ್ನು ಅಲ್ಲಿಗೆ ಪೋಸ್ಟ್ ಮಾಡಿದೆವು. ಆದರೆ ಅವರು ಪಿ.ಜಿ. ಕೋರ್ಸ್‌ಗೆ ಹೋದರು. ಈಗ ಜಾಗ ಖಾಲಿ ಇದೆ. ನಮ್ಮಲ್ಲಿ ಮಹಿಳಾ ವೈದ್ಯರ ಕೊರತೆ ಜಾಸ್ತಿ ಇದೆ. ತಮ್ಮ ಪಕ್ಕದ ಊರಿನಲ್ಲಿರತಕ್ಕ ಕಲ್ಲಮಂಗಳೂರು ಆಸ್ಪತ್ರೆಯಲ್ಲಿ ವೈದ್ಯರು ಖಾಲಿ ಇದ್ದಾರೆ. ಅವರ ಪಕ್ಕದ ಆಸ್ಪತ್ರೆಯಿಂದ ವಾರಕ್ಕೆ ಎರಡು ಸಾರಿ ಹೋಗಿ ನೋಡಿಕೊಂಡು ಬರತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಅಲ್ಲಿಗೆ ಮಹಿಳಾ ವೈದ್ಯರನ್ನು ಕೊಡಲೇ ತಾವು ಕಳುಹಿಸಬೇಕು. ಕಳೆದ 2 ವರ್ಷದಿಂದ ಮಹಿಳಾ ವೈದ್ಯರಿಲ್ಲದೆ ಯಾವುದೇ ಶುಶ್ರೂಷೆ ಮಹಿಳೆಯರಿಗೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಕೊಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ. ಪುಟ್ಟಸ್ವಾಮಿಗೌಡ:- ಆಗಲಿ, ಮಾಡಿಸುತ್ತೇನೆ.

ಶ್ರೀ ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮೋಟಮ್ಮನವರು ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಪಟ್ಟಣ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೈದ್ಯರಿದ್ದಾರೆಂದು ತಿಳಿದುಬಂದಿದೆ. ಆದರೆ ಗ್ರಾಮಾಂತರ ಪ್ರದೇಶಕ್ಕೆ ವೈದ್ಯರು ಹೋಗಿ ಕೆಲಸಮಾಡುವುದಿಲ್ಲ ಎಂದರೆ ಇದರ ಬಗ್ಗೆ ಸರ್ಕಾರದ ನೀತಿ ನಿಯಮ ಏನಿದೆ ಎಂಬುದನ್ನು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ:- ಸರ್ಕಾರದ ನೀತಿ ನಿಯಮಗಳು ಏನೂ ಇಲ್ಲ, ಆದರೆ ಅನುಷ್ಠಾನಕ್ಕೆ ತರುವುದರಲ್ಲಿ ಸ್ವಲ್ಪ ಕೊರತೆ ಇದೆ. ಏನೆಂದರೆ, ನಮ್ಮ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಬಹುತೇಕ ಜನತಾ ಪ್ರತಿನಿಧಿಗಳೇ ನನ್ನ ಹತ್ತಿರ ಬಂದು ಇಂಥ ವೈದ್ಯರನ್ನು ಬೆಂಗಳೂರಿಗೆ ಹಾಕಿಕೊಡಿ ಎಂದು ಶಿಫಾರಸುಗಳನ್ನು ಸಾಕಷ್ಟು ಮಾಡುತ್ತಿದ್ದಾರೆ. ನಮ್ಮನ್ನೂ ಸೇರಿದಂತೆ ನಾನು ಹೇಳುತ್ತಿದ್ದೇನೆ. ಈ ವ್ಯವಸ್ಥೆ ನಮ್ಮಲ್ಲಿ ನಡೆದುಕೊಂಡು ಬರುತ್ತಿದೆ. ಹಳ್ಳಿಯಲ್ಲಿ ವೈದ್ಯರಿಲ್ಲ ಎಂದರೂ ಕೂಡ ಇವರಿಗೆ ಏನೋ ತೊಂದರೆ ಇದೆಯಂತೆ ಆದುದರಿಂದ ಇವರನ್ನು ಬೆಂಗಳೂರಿಗೇ ಹಾಕಿಕೊಡಿ ಎಂದು ಹೇಳತಕ್ಕ ವಾದ ಇದೆ. ಇದನ್ನು ಸರಿಪಡಿಸುವುದಕ್ಕೆ ಎಲ್ಲ ಜನರ ಸಹಕಾರವೂ ನಮಗೆ ಬೇಕಾಗುತ್ತದೆ. ಹಳ್ಳಿಯ ಕಡೆ ವೈದ್ಯರೇ ಇಲ್ಲದಿರತಕ್ಕದ್ದು ನಿಜ. ಆದುದರಿಂದ ಈ ಯೋಜನೆ ಕಾರ್ಯಗತವಾಗುವುದಕ್ಕೆ ಬಹಳಷ್ಟು ಕಷ್ಟವಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:- ವೈದ್ಯರನ್ನು ಆಯ್ಕೆ ಮಾಡಿಕೊಳ್ಳುವಾಗ ರೂರಲ್ ಸರ್ವಿಸನ್ನು ಕಂಪಲ್ಸರಿ ಮಾಡಿ, ರೂರಲ್ ಅಲೋಯನ್ಸನ್ನು ಪೆಟ್ಟಿಗೆ ಮಾಡುತ್ತೀರಾ?

ಶ್ರೀ ಜೆ. ಪುಟ್ಟಸ್ವಾಮಿಗೌಡ:- ರೂರಲ್ ಸರ್ವಿಸ್‌ನ್ನು ಕಂಪಲ್ಸರಿ ಎಂದು ಮಾಡಿದ್ದೇವೆ ಆದರೆ ಈ ಕಾರಣದಿಂದ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿಲ್ಲ, ರೂರಲ್ ಅಲೋಯನ್ಸನ್ನು ಕೊಡುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ.

ವೈದ್ಯಕೀಯ ಮಹಾವಿದ್ಯಾಲಯಗಳಿಂದ ಬಾಕಿ

90 (496) ಶ್ರೀ ಪಿಲಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

1) ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಸಗೀ ವೈದ್ಯಕೀಯ ವಿದ್ಯಾಲಯದವರು ಕ್ಲಿನಿಕಲ್ ಸೌಲಭ್ಯವನ್ನು ಉಪಯೋಗಿಸಿ ಕೊಂಡು ಸರ್ಕಾರಕ್ಕೆ ಕೊಡಬೇಕಾದ ಬಾಕಿ ಎಷ್ಟು? (ಪ್ರತಿ ಕಾಲೇಜಿನ ಬಾಕಿಯ ವಿವರವನ್ನು ನೀಡುವುದು)

2) ಬಾಕಿ ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?